ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 1868/2024

PW-1

ದಿನಾಂಕ 05.02.2026 ರ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಫ್ರಾಸಾ 1 ರವರನ್ನು ಪುನಃ ಪಾಟೀಸವಾಲಿಗೆ ಕರೆಯಿಸಲಾಯಿತು.

ದಿನಾಂಕ 05.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್.ಪಿ.ಬಿ. ವಕೀಲರಿಂದಃ**

ನಾನು ಮುತ್ತಶೆಟ್ಟಿಯೂರು ಗ್ರಾಮದವಳಾಗಿರುತ್ತೇನೆ. ಆರೋಪಿ ಗೆಜ್ಜಲನತ್ತ ಗ್ರಾಮದವರಾಗಿರುತ್ತಾರೆ. ಆರೋಪಿ ನನಗೆ ನಾನು ಹುಟ್ಟಿದಾಗಿನಿಂದಲೂ ಪರಿಚಯ ಇರುತ್ತಾರೆ. ನಾನು ಮತ್ತು ಆರೋಪಿ ಒಂದೇ ಜನಾಂಗದವರಾಗಿರುತ್ತೇವೆ. ನಾನು ಸುಮಾರು 10 ವರ್ಷದಿಂದ ಆರೋಪಿಯ ಅಕ್ಕನ ಮನೆಯಲ್ಲಿ ಬಾಡಿಗೆಗೆ ಇರುತ್ತೇನೆ. ನನ್ನ ಬಳಿ ರೂ. 8,40,000/- ಹಣ ಇರುವುದರ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸುಮಾರು 10 ವರ್ಷಗಳಿಂದ ಬ್ಯೂಟಿ ಪಾರ್ಲರ್ ನ್ನು ನಡೆಸುತ್ತಿದ್ದೇನೆ. ನನಗೆ ಆಸ್ತಿ ಇರುತ್ತದೆ. ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುತ್ತಿಲ್ಲ.

ಆರೋಪಿಯವರ ಹೆಂಡತಿ ಸಂತೇಮರಹಳ್ಳಿ ಗ್ರಾಮದವರು. ಆರೋಪಿ ತಮ್ಮ ಹೆಂಡತಿ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಅವರು ಈಗ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಮದುವೆಯಾಗಿ ಸುಮಾರು 15 ವರ್ಷ ಆಗಿರಬಹುದು. ಆರೋಪಿಯು 15 ವರ್ಷಗಳಿಂದ ಸಂತೇಮರಹಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಾಲ ನೀಡುವಾಗ ನಾನು, ನನ್ನ ಗಂಡ ಮತ್ತು ಆರೋಪಿ ಮತ್ತು ಅವರ ಹೆಂಡತಿ ಇದ್ದರು. ನಾನು ಆರೋಪಿಗೆ ನಗದು ರೂಪದಲ್ಲಿ ಹಣ ನೀಡಿರುತ್ತೇನೆ.

ಆರೋಪಿಯನ್ನು ಮುರುಗೇಶ ಮತ್ತು ಶ್ರೀನಿವಾಸ ಎಂಬ ಎರಡು ಹೆಸರುಗಳಿಂದ ಕರೆಯುತ್ತಾರೆ ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.